MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 2-12-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ನವೆಂಬರ್ ತಿಂಗಳ ಮಲೇಶಿಯನ್ ಪಾಮೆಣ್ಣೆ ಉತ್ಪಾದನೆ ಇಳಿಕೆ

ಯುನೈಟೆಡ್ ಪ್ಲಾಂಟೇಶನ್ ಅಂದಾಜಿನಂತೆ ಮಲೇಶಿಯನ್ ಪಾಮೆಣ್ಣೆ ಉತ್ಪಾದನೆ ನವೆಂಬರ್ ತಿಂಗಳಲ್ಲಿ 5 ರಿಂದ 8 ಶೇಕಡಾ ಇಳಿಕೆಯಾಗಲಿದೆಯೆನ್ನಲಾಗಿದೆ. ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಲ್ಲಿ ಸುರಿದ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಿಂದ ಪಾಮ್ ಕಟಾವು ಹಾಗೂ ಸಾಗಣೆ ಬಾಧಿತವಾಗಿ ಉತ್ಪಾದನೆ ಇಳಿಕೆಯಾಗಲಿದೆಯೆನ್ನಲಾಗಿದೆ. ಪಾಮ್ ಪ್ಲಾಂಟೇಶನ್‌ಗಳಲ್ಲಿ ನವೆಂಬರ್ ತಿಂಗಳ 15 ಕ್ಕಿಂತ ಹೆಚ್ಚಿನ ದಿನಗಳಲ್ಲಿ ಪ್ರವಾಹದ ನೀರು ಕೆಲವು ಫೀಟಗಳಷ್ಟು ಹೆಚ್ಚಿ ಎತ್ತರಕ್ಕೇರಿತ್ತೆನ್ನಲಾಗಿದ್ದು ಇದರಿಂದ ಕಟಾವು ಹಾಗೂ ಸಾಗಾಣಿಕೆ ತೊಂದರೆಯಾಗಿ ಉತ್ಪಾದನೆ ಕಡಿಮೆಯಾಗಲಿದೆಯೆನ್ನಲಾಗಿದೆ. ಪ್ರಸ್ತುತ ಫ್ಯೂಚರ್ ದರವೂ ಹೆಚ್ಚಳದಲ್ಲಿದ್ದು, ಉತ್ಪಾದನಾ ಇಳಿಕೆ ದರ ಹೆಚ್ಚಳಕ್ಕೆ ಪೂರಕವಾಗಬಹುದು. ಮಲೇಶಿಯಾ ಡಿಸೆಂಬರ್ ತಿಂಗಳಿಗೆ ಪಾಮೆಣ್ಣೆ ರಫ್ತು ತೆರಿಗೆ 8 ಶೇಕಡಾದಲ್ಲಿ ಮುಂದುವರಿಸಿದ್ದು ರೆಫೆರೆನ್ಸ್ ದರ ಟನ್‌ಗೆ 3847.24 ($ 866.50) ರಿಂಗಿಟ್ಸ್‌ಗೆ ನಿಗದಿಗೊಳಿಸಿದೆಯೆನ್ನಲಾಗಿದೆ.

## ಮಲೇಶಿಯನ್ ಪಾಮೆಣ್ಣೆ ನವೆಂಬರ್ ರಫ್ತು 2.8 ಶೇಕಡಾ ಹೆಚ್ಚಳ

ನವೆಂಬರ್ ತಿಂಗಳಲ್ಲಿ ಮಲೇಶಿಯನ್ ಪಾಮೆಣ್ಣೆ ರಫ್ತು 2.8 ಶೇಕಡಾ ಹೆಚ್ಚಳ ಗೊಂಡು 1519,560 ಟನ್‌ಗಳಾಗಿವೆಯೆಂದು ಕಾರ್ಗೋ ಸರ್ವೇಯರ್ SGS ತಿಳಿಸಿದೆ. ಸತತ 2 ತಿಂಗಳಲ್ಲಿ ದರ ಹೆಚ್ಚಳದ ನಂತರ ಈ ವಾರ ಫ್ಯೂಚರ್ ದರ ಇಳಿಕೆಯತ್ತ ಸಾಗುತ್ತಿದ್ದು ಈ ವಾರದಲ್ಲಿ 3.26 ಶೇಕಡಾ ಇಳಿಕೆ ದಾಖಲಿಸುತ್ತಿದೆ. ಇಂದಿನ 1.79 ಶೇಕಡ ದರ ಇಳಿಕೆಯೊಂದಿಗೆ ಟನ್‌ಗೆ 4005 ರಿಂಗಿಟ್ಸ್ ($ 911.89) ಕ್ಕೆ ಇಳಿಕೆಯಾಗಿದೆ.

## ದಾವಣಗೆರೆ ಜೋಳ ದರ ಹೆಚ್ಚಳ

ಕೈಗಾರಿಕಾ ವಲಯದ ಬೇಡಿಕೆ ಹೆಚ್ಚಳದಿಂದ ದಾವಣಗೆರೆಯಲ್ಲಿ ಜೋಳ ದರ ಹೆಚ್ಚಳ ಕಂಡಿದ್ದು, ಬಿಹಾರದ ಪೂರ್ನಿಯಾ ಮಾರುಕಟ್ಟೆಯ ದರ ಸ್ಥಿರವಿದೆ.